# ಬೆಂಗಳೂರು ಆರ್ಟ್ ಉತ್ಸವಕ್ಕೆ ಚಾಲನೆ

ಬೆಂಗಳೂರು, ಆ.17- ಬಹುದಿನಗಳಿಂದ ಎದುರು ನೋಡುತ್ತಿದ್ದ ನಾಲ್ಕನೆ ಆವೃತ್ತಿಯ ಬೆಂಗಳೂರು ಆರ್ಟ್-2013 ಕಾರ್ಯಕ್ರಮಕ್ಕೆ ಅದ್ಧೂರಿ ಚಾಲನೆ ದೊರೆತಿದೆ.

ಯುಬಿ ಸಿಟಿ ಸಹಭಾಗಿತ್ವದಲ್ಲಿ ಸಬ್ಲಿಮೆ ಗ್ಯಾಲರಿಯ ಮತ್ತು ಆರ್ಟ್ ಚುಟ್ನಿ ಪ್ರಾಯೋಜಕತ್ವದಲ್ಲಿ ಇದೇ ತಿಂಗಳ 23ರವರೆಗೆ ನಡೆಯಲಿರುವ ಈ ಉತ್ಸವದಲ್ಲಿ ನೂರು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಲಾವಿದರು ಭಾಗವಹಿಸಲಿದ್ದಾರೆ.

ಬೆಳೆಯುತ್ತಿರುವ ಬೆಂಗಳೂರನ್ನು ಗುರಿಯಾಗಿಟ್ಟುಕೊಂಡು ಕಲೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಾಲ್ಕನೆ ಆವೃತ್ತಿಗೆ ಚಾಲನೆ ನೀಡಲಾಗಿದೆ.

ಸುಮಾರು ಒಂದು ವಾರದ ಕಾಲ ನಡೆಯಲಿರುವ ಈ ಉತ್ಸವದಲ್ಲಿ ದೇಶ-ವಿದೇಶಗಳ ಖ್ಯಾತ ಕಲಾವಿದರುಗಳು ಭಾಗವಹಿಸಿ ತಮ್ಮ ಕೈ ಚಳಕ ತೋರಿಸಲಿ ದ್ದಾರೆ.

ಹೆಚ್ಚಿನ ಮಾಹಿತಿಗೆ 9886099736 ಸಂಪರ್ಕಿಸ ಬಹುದು.

